**2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**
**ಅರಕಲಗೂಡು**
**ಸಿ.ಸಿ. ನಂಃ 44/2019**

| | | | | | |
|---|---|---|---|---|---|
| ಸಾಕ್ಷಿಯ ಹೆಸರು | ಃ | ಲಕ್ಷ್ಮಮ್ಮ | ದಿನಾಂಕಃ | ಃ | 12.05.2026 |
| ಗಂಡನ ಹೆಸರು | ಃ | ಶೇಶಾದ್ರಿಗೌಡ | ಸಿ.ಬ್ಲ್ಯೂಃ | ಃ | 1 |
| ವಯಸ್ಸು | ಃ | 70 ವರ್ಷ | ಪಿ.ಬ್ಲ್ಯೂಃ | ಃ | 1 |
| ಉದ್ಯೋಗ | ಃ | ಗೃಹಿಣಿ | | | |
| ವಿಳಾಸ | ಃ | ನೆಲಬಳ್ಳಿ ಗ್ರಾಮ | | | |

ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸಸಅ ರವರಿಂದಃ-

ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನಗೆ ಗೊತ್ತಿಲ್ಲ. ಆರೋಪಿ ನನ್ನ ಮಗನಿಗೆ ಯಾವುದೇ ಅಪಘಾತ ಮಾಡಿಲ್ಲ. ನನ್ನ ಮಗನು ಯಾವ ವಾಹನದಿಂದ ಮೃತಪಟ್ಟನು ಎಂದು ನನಗೆ ಗೊತಿತಲ್ಲ. ಸಾಕ್ಷಿಯು ಒಂದು ದಾಖಲೆಯನ್ನು ತೋರಿಸಲಾಗಿ ಅದು ದೂರಾಗಿದ್ದು ಅದರಲ್ಲಿರುವ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಈ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಇನ್ನುಳಿದ ಯಾವುದೇ ವಿಚಾರಗಳು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎಪಿಪಿಯವರಿಂದಃ**

ದಿಃ 13.11.2018 ರಂದು ಸಂಜೆ 6.15 ಗಂಟೆಗೆ ನನ್ನ ಮಗ ಮೃತ ರಂಗಸ್ವಾಮಿಯವರು ಮೆಣಸಿನ ಗಿಡವನ್ನು ತರಲು ಅರಕಗೂಡಿಗೆ ಹೋಗಿ ತನ್ನ ಬಾಬ್ತು ಸಂ.ಕೆಎ-13-ಇಎನ್-1731ರ ಬೈಕಿನಲ್ಲಿ ಹಾಸನ ಅರಕಗೂಡು ರಸ್ತೆಯಲ್ಲಿ ಶೆಟ್ಟಿಗೌಡ ಸರ್ಮೀಸ್ ಸ್ಟೇಷನ್ ಮುಂದೆ ರಸ್ತೆಯ ಎಡಬದಿಯಲ್ಲಿ ಬರುತ್ತಿರುವಾಗ ಹಾಸನ ಕಡೆಯಿಂದ ಕೆಎ-13-ಇಜಿ-9554 ರ ಬೈಕನ್ನು ಆರೋಪಿಯು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡುಬಂದು ನನ್ನ ಮಗನಿಗೆ ಡಿಕ್ಕಿಪಡಿಸಿದ ಪರಿಣಾಮ ನನ್ನ ಮಗನು ಬೈಕು ಸಮೇತ ರಸ್ತೆಯ ಮೇಲೆ ಬಿದ್ದು ತಲೆಗೆ ತೀವ್ರ ಸ್ವರೂಪದ ಗಾಯವುಂಟಾಗಿ ಪೆಟ್ಟಾಯಿತು ಎಂದರೆ ಸರಿಯಲ್ಲ. ಅಪಘಾತದಿಂದ

ನೋವುಂಟಾಗಿ ಒದ್ದಾಡುತ್ತಿದ್ದ ನನ್ನ ಮಗನನ್ನು ಚಾಸಾ 2ರವರು ಎತ್ತಿಸುದಾರಿಸಿ ಪ್ರಥಮ ಚಿಕಿತ್ಸೆಗಾಗಿ ಅಕರಲಗೂಡು ಆಸ್ಪತ್ರೆಗೆ ಸೇರಿಸಿ ಹೆಚ್ಚಿದ ಚಿಕಿತ್ಸೆಗಾಗಿ ಹಾಸನದ ಆಸ್ಪತ್ರೆಗೆ ಸೇರಿಸಿ ಅಲ್ಲಿದ ವೈದ್ಯರ ಸಲಹೆಗೆ ಮೇರೆಗೆ ಹೆಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಕಣ್ವ ಆಸ್ಪತ್ರೆಗೆ ದಾಖಲೆಸಿ ಚಿಕಿತ್ಸೆ ಕೊಡಿಸುತ್ತಿರುವಾಗ ದಿಃ14.11.2018 ರಂದು ಬೆಳಗ್ಗೆ 10 ಗಂಟೆಗೆ ಚಿಕಿತ್ಸೆಫಲಕಾರಿಯಾಗಿದೆ ನನ್ನ ಮಗನು ಮೃತಪಟ್ಟಿರುತ್ತಾನೆಂದರೆ ಸರಿಯಲ್ಲ. ಈ ಅಪಘಾತದ ಹಿನ್ನಲೆಯಲ್ಲಿ ನಾನು ನಿಪಿ.1 ರಂತೆ ದೂರು ನೀಡಿ, ನಿಪಿ.1 ಕ್ಕೆ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಅಪಘಾತಕ್ಕೊಳಗಾದ ನನ್ನ ಮಗನ ವಾಹನವಾದ ಕೆಎ–13–ಇಎನ್–1731ರ ಬೈಕನ್ನು ದಿಃ 24.11.2018 ರಂದು ಇಂಡಿನಿಮಿನಿಟಿ ಬಾಂಡ್ ಮೂಲಕ ನನ್ನ ಮಧ್ಯಂತರ ವಶಕ್ಕೆ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಇಂಡಿನಿಮಿನಿಟಿ ಬಾಂಡ್ ನಲ್ಲಿರುವ ಸಹಿಯನ್ನು ಗುರುತಿಸಿದ ಮೇರೆಗೆ ಇಂಡಿನಿಮಿನಿಟಿ ಬಾಂಡ್ ನಿಪಿ.2 ಎಂದು, ಇಂಡಿನಿಮಿನಿಟಿ ಬಾಂಡ್ ನಲ್ಲಿರುವ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಈ ಪ್ರಕರಣದ ಎಲ್ಲ ವಿಚಾರಗಳು ತಿಳಿಸಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ದಿಃ24.11.2018 ರಂದು ಬೈಕನ್ನು ಇಂಡಿನಿಮಿನಿಟಿ ಬಾಂಡ್ ಬರೆದಕೊಡುವ ಮೂಲಕ ಬೈಕನ್ನು ಬಿಡಿಸಿಕೊಂಡಿರುತ್ತೀರೆಂದರೆ ಸರಿ. ಬೈಕ ನಂ.ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

(ಶ್ರೀಮತಿ. ಸುಮ ಟಿ.)
2ನೇ ಅಧಿಕ ಸಿವಿಲ್ ನ್ಯಾಯಾಧೀಶರು,
ಅರಕಲಗೂಡು.